**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿ.ಸಿ.ನಂಬ್ರಃ 909/2019**

D.W – 3

**ಸಾಕ್ಷಿದಾರರ ಹೆಸರು** : ದ್ಯಾಮಪ್ಪ ಎನ್. ಆರ್.
**ತಂದೆಯ ಹೆಸರು** : ರಾಮಪ್ಪ
**ವಯಸ್ಸು** : 42 ವರ್ಷ
**ಉದ್ಯೋಗ** : ವ್ಯವಸಾಯ
**ವಾಸ** : ಕೆಂಚಾಪುರ

**ದಿನಾಂಕಃ 29-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಆರೋಪಿ ಪರ ವಕೀಲರಿಂದ**

ನಾನು ಈ ದಿನ ಆರೋಪಿ ಚೆಕ್ ಅಮಾನ್ಯಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಆರೋಪಿ ಗೊತ್ತು. ಆತ ನನಗೆ ಬಹಳ ದಿನಗಳಿಂದ ಗೊತ್ತು. ಕಾರಣ ಆತ ನಮ್ಮ ಊರಿನವನು. ಆರೋಪಿತನ ಮೇಲೆ ನನಗೆ ಪರಿಚಯಸ್ಥ ಫಿರ್ಯಾದಿದಾರ ದೂರು ದಾಖಲಿಸಿರುತ್ತಾನೆ. ನಾನು ಬೀಜ ಬೆಳೆಯುವ ವ್ಯಾಪಾರ ಮಾಡುತ್ತಿದ್ದೆ. ಫಿರ್ಯಾದಿದಾರ ನಮ್ಮ ಊರಿಗೆ ಮೊದಲು ಬೀಜ ಖರೀದಿ ಮಾಡಲು ಬರುತ್ತಿದ್ದರು. ಬೀಜ ಉತ್ಪಾದನೆ ಬಹಳ ಜನ ಮಾಡಲು ಪ್ರಾರಂಭ ಮಾಡಿದ್ದರಿಂದ ಬೀಜವನ್ನು ನಾವು ಎಲ್ಲರೂ ಸೇರಿ ಆರೋಪಿತನ ಬಳಿ ಕೊಡುತ್ತಿದ್ದೆವು. ಆರೋಪಿ ಅದನ್ನು ಫಿರ್ಯಾದಿದಾರನಿಗೆ ಕೊಡುತ್ತಿದ್ದರು.

ಮುಂಗಡವಾಗಿ ಫಿರ್ಯಾದಿದಾರ ಬೀಜ ಉತ್ಪಾದನೆ ಸಲುವಾಗಿ ಖರ್ಚು ವೆಚ್ಚಕ್ಕಾಗಿ ಹಣ ಕೊಡುತ್ತಿದ್ದ. ಸದ್ರಿ ಮುಂಗಡ ಹಣಕ್ಕಾಗಿ ಫಿರ್ಯಾದಿದಾರ ನಮ್ಮ ಕಡೆಯಿಂದ ಅದರ ಭದ್ರತೆಗಾಗಿ ಚೆಕ್ಕನ್ನು ಪಡೆಯುತ್ತಿದ್ದ. ಸದ್ರಿ ಬೀಜ ಉತ್ಪಾದನೆ ಮಾಡಿ ಮರಳಿ ಅದನ್ನು ಫಿರ್ಯಾದಿದಾರನಿಗೆ ಕೊಡುತ್ತಿದ್ದೆವು. ಆತ ಕೊಟ್ಟ ಹಣಕ್ಕೆ ಸರಿಯಾದಲ್ಲಿ ಚೆಕ್ಕನ್ನು ಮರಳಿ ಕೊಡುತ್ತಿದ್ದ ಹೆಚ್ಚಿಗೆ ಹಣ ಕೊಡಬೇಕಾದರೆ ಆತ ಹೆಚ್ಚಿಗೆ ಹಣವನ್ನು ನಮಗೆ ಕೊಡುತ್ತಿದ್ದ.

2016 – 17 ರಲ್ಲಿ ಫಿರ್ಯಾದಿದಾರ ಆರೋಪಿತನ ಕಡೆಯಿಂದ 3 ಕ್ವಿಂಟಾಲ್ ಬೀಜ ಕೊಡಿ ಎಂದು ಕೇಳಿದ್ದ. ಆ ಸಮಯದಲ್ಲಿ ರೋಗ ಬಂದಿದ್ದರಿಂದ ಮತ್ತು ಮಳೆ ಸರಿಯಾಗಿ ಆಗದ ಕಾರಣ ಅಷ್ಟೊಂದು ಬೆಳೆ ಬೆಳೆದಿರಲಿಲ್ಲ ಮತ್ತು ಕೇವಲ 47 ಕೆಜಿ ಮಾತ್ರ ಬೆಳೆ ಬಂದಿತ್ತು. ಆ ಕಾರಣಕ್ಕಾಗಿ ಫಿರ್ಯಾದಿದಾರ ಆರೋಪಿತನ ವಿರುದ್ಧ ಜಗಳ ತೆಗೆದು ಕಾರಣ ಬೀಜವನ್ನು ಬೇರೆಯವರಿಗೆ ಮಾರಾಟ ಮಾಡಿ ತನಗೆ ಕೇವಲ 47 ಕೆಜಿ ಕೊಟ್ಟಿರುತ್ತೇನೆ ಎಂದು ಅವರವರಲ್ಲಿ ಗಲಾಟೆ ಮಾಡಿಕೊಂಡಿದ್ದರು.

ಚೆಕ್ ಕೇಳಲು ಆರೋಪಿ ಹೋದಾಗ ಚೆಕ್ಕು ನನ್ನ ಬಳಿಯೇ ಇರುತ್ತದೆ ಎಲ್ಲಿಯೂ ಹೋಗುವುದಿಲ್ಲ ಮುಂದಿನ ವ್ಯವಹಾರ ಆದ ನಂತರ ಕೊಡುತ್ತೇನೆ ಎಂದು ಹೇಳಿದ್ದ. ಹಾಗೆ ಹೇಳಿದ್ದರಿಂದ ನಂಬಿಕೆ ಮೇರೆಗೆ ನಾವು ಮರಳಿ ಬಂದಿದ್ದೆವು. ಆದರೆ ಫಿರ್ಯಾದಿದಾರ ಈ ಸದ್ರಿ ಪ್ರಕರಣವನ್ನು ಆರೋಪಿತನ ವಿರುದ್ಧ ದಾಖಲಿಸಿರುತ್ತಾನೆ.

**ಪಾಟೀ ಸವಾಲುಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ರೂ.500/- ದಂಡದೊಂದಿಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರು.**

**ಸಾಕ್ಷಿದಾರರ ಸಹಿಃ**